# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | TUESDAY | 13-9-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕಚ್ಚಾ ಪಾಮೆಣ್ಣೆ, ಸೋಯಾಬೀನ್ ಎಣ್ಣೆ ಫ್ಯೂಚರ್ ಟ್ರೇಡಿಂಗ್ ಆರಂಭಕ್ಕೆ ಮನವಿ

ದೇಶೀ ಮಾರುಕಟ್ಟೆಯಲ್ಲಿ ಕಚ್ಚಾ ಪಾಮೆಣ್ಣೆ ಹಾಗೂ ಸೋಯಾಬೀನ್ ಎಣ್ಣೆ ಫ್ಯೂಚರ್ ವ್ಯವಹಾರ ಆರಂಭಿಸಲು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ SEBI ಗೆ ಕೇಳಿಕೊಂಡಿದೆಯೆನ್ನಲಾಗಿದೆ. ಈ ಮೊದಲು ಡಿಸೆಂಬರ್ 2021 ರಲ್ಲಿ SEBI ಇವುಗಳ ಫ್ಯೂಚರ್ ವ್ಯವಹಾರವನ್ನು ವಜಾ ಮಾಡಿತ್ತು.

## ಸೆಪ್ಟೆಂಬರ್ 1–10 ರ ಅವಧಿಯಲ್ಲಿ ಮಲೇಶೀಯನ್ ಪಾಮೆಣ್ಣೆ ರಫ್ತು ಹೆಚ್ಚಳ

ಸೆಪ್ಟೆಂಬರ್ 1–10 ರ ಅವಧಿಯಲ್ಲಿ ಮಲೇಶೀಯನ್ ಪಾಮೆಣ್ಣೆ ರಫ್ತು ಹಿಂದಿನ ತಿಂಗಳ ಈ ಅವಧಿಯಲ್ಲಿದ್ದುದಕ್ಕಿಂತ 9.3 ರಿಂದ 25.5 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದ್ದು, ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ 2.45 ಶೇಕಡಾ ಹೆಚ್ಚಳವಾಗಿದೆ. ಇಂದು ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 4 ಶೇಕಡಾ ಹೆಚ್ಚಳವಾಗಿದೆ.

## 2022–23 ರಲ್ಲಿ ಅಮೇರಿಕಾದ ಸೋಯಾಬೀನ್ ಉತ್ಪಾದನೆ ಇಳಿಕೆ

2022–23 ರಲ್ಲಿ ಅಮೇರಿಕಾದ ಸೋಯಾಬೀನ್ ಉತ್ಪಾದನೆ 1.52 ಮಿಲಿಯನ್ ಬರೆಲ್ ಇಳಿಕೆ ಯಾಗಿ 4.37 ಮಿಲಿಯನ್ ಗಳಾಗಬಹುದೆಂದು ಪುನರಾಂದಾಜಿಸಿ ಉತ್ಪಾದನೆ, ಅಂತ್ಯದ ದಾಸ್ತಾನು ಹಾಗೂ ರಫ್ತು ಇಳಿಕೆಯಾಗಬಹುದೆನ್ನಲಾಗಿದೆ. ಕಟಾವಿನ ವಿಸ್ತೀರ್ಣ ಹಾಗೂ ಇಳುವರಿಯಲ್ಲಿ ಇಳಿಕೆಯಾಗಲಿದೆಯೆನ್ನಲಾಗಿದೆ. ಚಿಕಾಗೋ ಸೋಯಾಬೀನ್ ಫ್ಯೂಚರ್ ದರ 5.4 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಭಾರತದಲ್ಲಿ ಸೋಯಾಬೀನ್ ಫ್ಯೂಚರ್ ದರ 1.03 ಶೇಕಡಾ ಇಳಿಕೆಯಾಗಿದೆ. ಚಿಕಾಗೋ ಸೋಯಾಬೀನ್ ಎಣ್ಣೆ ಫ್ಯೂಚರ್ ದರ 2.5 ಶೇಕಡಾ ಹೆಚ್ಚಳವಾಗಿದೆ.